ಮೂಲ ದಾವಾ ಸಂಖ್ಯೆ 27/2018

ಪಿ ಡಬ್ಲ್ಯೂ-1

**<u>(ದಿನಾಂಕ 23.08.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)</u>**

**<u>ಮುಂದುವರಿದ ಪಾಟೀ ಸವಾಲು ಡಿಕ್ರಿದಾರರ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ-</u>**

ಅಮಲ್ಜಾರಿ ಅರ್ಜಿಯ ಪಶ್ಚಿಮಕ್ಕೆ ಹೊಂದಿಕೊಂಡು ನಕ್ಷತ್ರ ಹೋಟಲ್ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಸದರಿ ಹೋಟಲನ್ನು ದಾದಾಸಾಬ್ ರವರ ಹಿರಿಯ ಮಗಳು ಗಂಡನನ್ನು ಬಿಟ್ಟು ಬಂದ ನಂತರ ಅವರು ನಡೆಸುತ್ತಿದ್ದರು ಎಂದರೆ ಸರಿಯಲ್ಲ. ದಾದಾಸಾಬ್ ರವರಿಂದ ಹಣ ವಸೂಲಿ ಮಾಡಿಕೊಡುವಂತೆ ಈ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಮೇಲೆ ಯಾವುದೇ ಜವಾಬ್ದಾರಿ ಇಲ್ಲಾ ಎಂದರೆ ಸರಿ. ನಾನು ಅರ್ಜಿಗೆ ಅವಶ್ಯಕ ಪಕ್ಷಗಾರನಲ್ಲಾ ಎಂದರೆ ನಾನು 3 ನೇ ಪಕ್ಷಗಾರ. ಸಿದ್ದಲಿಂಗಪ್ಪನಿಗೆ ತೊಂದರೆ ಕೊಡಲು ಪ್ರಕರಣ ವಿಳಂಬ ಮಾಡಲು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಅವಧಿ ಹಾಳುಮಾಡುವ ಉದ್ದೇಶ ದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಡಿಕ್ರಿದಾರ ಸಿದ್ದಲಿಂಗಪ್ಪ ನನ್ನ ವಿರುದ್ದ ಹಣ ವಸೂಲಾತಿ ಕೋರಿಲ್ಲಾ ಎಂದರೆ ಸರಿ. ಆಸ್ತಿ ನೋಂದಣಿ ಮಾಡಿಸಿಕೊಡುವಂತೆ ಪರಿಹಾರ ಕೇಳಿರುವುದಿಲ್ಲಾ ಎಂದರೆ ನನ್ನ ಆಸ್ತಿ ಜಪ್ತು ಮಾಡಲು ಬಂದಿದ್ದರು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ದುರುದ್ದೇಶ ದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.